# ಗಾಂಧೀಜಿಯಿಂದ ಗುರುಮಹಾರಾಜರವರೆಗೆ

**ಸ್ವಾಮಿ ಗೌತಮಾನಂದ**

**(೪. ೭. ೨೦೦೯ ರಂದು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಗಾಂಧೀ ಸಾಹಿತ್ಯ ಸಂಘದಲ್ಲಿ ಸ್ವಾಮೀಜಿಯವರು ಮಾಡಿದ ಭಾಷಣದ ಸಾರಾಂಶವಿದು.)**

**ಗಾ**ಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮದ ಕರೆಗೆ ಹಲವಾರು ಯುವಕರು ಓಗೊಟ್ಟು, ಆರ್ಥಿಕ ಮತ್ತು ಸಾಮಾಜಿಕ ಉನ್ನತಿಯ ಮಾರ್ಗವನ್ನು ಅನುಸರಿಸಿ, ಗ್ರಾಮೀಣ ದೀನದಲಿತರ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಸವೆಸಿದರು. ಕೊನೆಗೆ ಶ್ರೀರಾಮಕೃಷ್ಣ – ವಿವೇಕಾನಂದರ ಜೀವನ ಮತ್ತು ಸಂದೇಶಗಳಲ್ಲಿ ಗಾಂಧೀಜಿಯವರ ಲಕ್ಷ್ಯವು ಪರಿಪೂರ್ಣತೆಯನ್ನು ಪಡೆದುಕೊಂಡಿರುವುದನ್ನು ಕಂಡುಕೊಂಡು, ರಾಮಕೃಷ್ಣ ಮಹಾಸಂಘವನ್ನು ಸೇರಿಕೊಂಡರು. ಬೆಂಗಳೂರಿನ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘಕ್ಕೆ ಸೇರಿದ್ದ ನಾನೂ ಅಂಥ ಯುವಕರಲ್ಲಿ ಒಬ್ಬ ಎಂದು ನಮ್ರತೆಯಿಂದ ಹೇಳಿಕೊಳ್ಳುತ್ತೇನೆ. ಕನ್ನಡದ ಪ್ರಸಿದ್ಧ ಲೇಖಕರೂ ವಾಗ್ಮಿಗಳೂ ಸಮಾಜಸೇವಕರೂ ಸಚ್ಚಾರಿತ್ರ್ಯವಂತರೂ ಆದ ಸಿದ್ದವನಹಳ್ಳಿ ಕೃಷ್ಣಶರ್ಮರಿಂದ ಆಕರ್ಷಿತರಾಗಿ ನನ್ನಂಥ ಅನೇಕ ಯುವಕರು, ಅವರು ಸ್ಥಾಪಿಸಿದ್ದ ಗಾಂಧೀ ಸಾಹಿತ್ಯ ಸಂಘದ ಸದಸ್ಯರಾಗಿದ್ದರು. ಸುಮಾರು ಐವತ್ತು ವರ್ಷಕ್ಕೂ ಹೆಚ್ಚು ಪರಿಚಯವಿರುವ ಡಾ. ಎಚ್. ಶ್ರೀನಿವಾಸಯ್ಯ ಮತ್ತು ಈ ಸಂಸ್ಥೆಯ ಇತರ ಟ್ರಸ್ಟಿಗಳು ನನ್ನನ್ನು 'ಶ್ರೀ ಕೃಷ್ಣಶರ್ಮ ಸ್ಮಾರಕ ಭಾಷಣ' ವನ್ನು ಮಾಡುವಂತೆ ಆಹ್ವಾನಿಸಿದರು. ಅನೇಕ ವರ್ಷಗಳ ಅಂದರೆ ಸುಮಾರು ಅರುವತ್ತು ವರ್ಷಗಳ ಹಿಂದಿನ ಗಾಂಧೀ ಸಾಹಿತ್ಯ ಸಂಘದ ಜೊತೆಗಿನ ನನ್ನ ಒಡನಾಟದ ನೆನಪು ಮರುಕಳಿಸಿ ಬಂದು, ಹಳೆಯ ಸದಸ್ಯರನ್ನೂ ಹೊಸ ಸದಸ್ಯರನ್ನೂ ಭೇಟಿಮಾಡುವ ಹಂಬಲದಿಂದ ನಾನು ಬರಲು ಒಪ್ಪಿಕೊಂಡೆ.

ನಾನು 'ಗಾಂಧೀಜಿಯವರಿಂದ ಗುರುಮಹಾರಾಜರವರೆಗೆ' ಎಂಬ ವಿಷಯವನ್ನು ಆರಿಸಿಕೊಂಡಿದ್ದೇನೆ. ಗಾಂಧೀಜಿಯವರ ಪ್ರಭಾವವೆಂಬ ನದಿಯಲ್ಲಿ ಮಿಂದು, ಅನಂತರ ಶ್ರೀರಾಮಕೃಷ್ಣರೆಂಬ ಸಾಗರವನ್ನು ಸೇರಿದ ಹಲವಾರು ಯುವಕರಲ್ಲಿ ನಾನೂ ಒಬ್ಬ ಎಂದು ವಿನಯದಿಂದ ಹೇಳಿಕೊಳ್ಳುತ್ತಿದ್ದೇನೆ.

ಉಪನಿಷತ್ತಿನಲ್ಲಿ, **'ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ'** – "ಸಾಗರದಲ್ಲಿ ಸೇರಿದ ನದಿಗಳು ತಮ್ಮ ನಾಮರೂಪಗಳನ್ನು ಕಳೆದುಕೊಂಡು, ಸಮುದ್ರವೇ ಆಗಿಬಿಡುತ್ತವೆ" ಎಂದ ಹಾಗೆ, ನನ್ನ ಗಾಂಧೀ ಸಾಹಿತ್ಯ ಸಂಘದ ಜೀವನವೆಂಬ ನದಿ ಈಗ ರಾಮಕೃಷ್ಣ ಮಠದ ಸಂನ್ಯಾಸಿ ಎಂಬ ಸಮುದ್ರವನ್ನು ಸೇರಿ, ಅದರ ಹೆಸರನ್ನೇ ಉಳಿಸಿಕೊಂಡಿದೆ ಎಂದು ಸಂತೋಷವಾಗಿ ಹೇಳಿಕೊಳ್ಳುತ್ತಿದ್ದೇನೆ.

ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳಲ್ಲಿ ಒಬ್ಬರು. ಚೆನ್ನೈನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಇವರು ಉತ್ತಮ ವಾಗ್ಮಿಗಳು ಮತ್ತು ಪ್ರಬುದ್ಧ ಬರಹಗಾರರು ಕೂಡ.

ಹೀಗಾಗಿ ಗಾಂಧೀ ಸಾಹಿತ್ಯ ಸಂಘದ ಒಡನಾಟದ ನನ್ನ ಕೆಲವು ಹಳೆಯ ನೆನಪುಗಳ ಮೂಲಕ ನಾನು ಈ ಭಾಷಣವನ್ನು ಆರಂಭಿಸುತ್ತೇನೆ. ಅನಂತರ ಭಗವಾನ್ ಶ್ರೀರಾಮಕೃಷ್ಣರ ಅನುಪಮ ಜೀವನ ಮತ್ತು ನಮ್ಮೆಲ್ಲರಿಗೆ ಅವರ ಸಂದೇಶದ ವಿಷಯವನ್ನೇ ಪ್ರಮುಖವಾಗಿ ಮಾತನಾಡಲಿಚ್ಛಿಸುತ್ತೇನೆ.

೧೯೪೬ ರಿಂದ ೧೯೫೬ ರವರೆಗೆ ನಾನು ಗಾಂಧೀ ಸಾಹಿತ್ಯ ಸಂಘದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೆ ಎಂದು ನೆನಪು. ನಮ್ಮಂಥ ಯುವಕರ ಮನಸ್ಸಿನಲ್ಲಿ ಸತ್ಯ, ಸಂಯಮ, ತ್ಯಾಗ, ಸೇವೆ, ದೇಶಭಕ್ತಿಗಳನ್ನು ತುಂಬಿ, ನಮ್ಮ ಜೀವನಕ್ಕೆ ಒಂದು ಬಗೆಯ ಗಂಭೀರತೆಯನ್ನು ತಂದುಕೊಟ್ಟ ಹಿರಿಯರಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮರು ಬಹಳ ಮುಖ್ಯರಾದವರು ಎಂಬುದು ನಿಸ್ಸಂದೇಹವಾದುದು. ಅವರು ಗಾಂಧೀಜಿಯವರ ಜೀವನ ಮತ್ತು ಸಂದೇಶಗಳ ಬಗ್ಗೆ ಮಾತನಾಡುತ್ತಿದ್ದಾಗ, ಯುವಕರಾದ ನಾವು ಇದೇ ಆದರ್ಶ ಜೀವನ, ಇದರಿಂದಲೇ ನಮ್ಮ ವ್ಯಕ್ತಿಗತ ಮತ್ತು ದೇಶದ ಉನ್ನತಿ ಸಾಧ್ಯ ಎಂದು ಮನಸ್ಸಿನಲ್ಲೇ ಭಾವಿಸಿಕೊಳ್ಳುತ್ತಿದ್ದೆವು. ಅವರ ಮಾತುಗಳು ಮತ್ತು ಜೀವನದ ಮೂಲಕ ನಾವು ಗಾಂಧೀಜಿಯವರ ಜೀವನದ ತಿರುಳಾದ **ಸತ್ಯ, ಬ್ರಹ್ಮಚರ್ಯ, ದೇವರಲ್ಲಿ ನಂಬಿಕೆ, ಪ್ರಾರ್ಥನೆ, ದೇಶಭಕ್ತಿ, ತ್ಯಾಗ ಮತ್ತು ಸೇವೆ** – ಇವೆಲ್ಲವನ್ನೂ ಕಲಿತೆವು; ಅದೇ ದಾರಿಯಲ್ಲಿ ನಡೆಯಲು ಪ್ರಯತ್ನಪಟ್ಟೆವು.

ಚರಕಾ ನೂಲುವಿಕೆ, ಖಾದಿ ಧರಿಸುವುದು, ಗಾಂಧೀಜಿಯವರಂತೆ ಸರಳ ಜೀವನ ನಡೆಸುವುದು, 'ಶೋಕಿ' ಮಾಡದಿರುವುದು, ಬ್ರಹ್ಮಚಾರಿಯಾಗಿದ್ದುಕೊಂಡು ದೇಶಸೇವೆ, ಬಡವರ ದೀನದಲಿತರ ಸೇವೆ ಮಾಡುವುದು, ಸ್ವಾರ್ಥತ್ಯಾಗ, ರಾಮನಾಮ ಭಜನೆ, ಜಾತಿ–ಪಂಥಗಳಲ್ಲಿ ಅಸಡ್ಡೆ – ಇವು ನಮ್ಮ ಜೀವನಶೈಲಿಯಲ್ಲಿ ಸೇರಿಹೋಗಿದ್ದವು. ಇಂಥ ವಿಚಾರಗಳ ಕಡೆಗೆ ಹಲವಾರು ಯುವಕರನ್ನು ಆಕರ್ಷಿಸಿದ ಶ್ರೇಯಸ್ಸು ಶ್ರೀ ಕೃಷ್ಣಶರ್ಮರಿಗೆ ಸಲ್ಲುತ್ತದೆ.

ಇಲ್ಲಿನ ಗ್ರಂಥಾಲಯದಲ್ಲಿ ದೇಶಭಕ್ತಿ–ಈಶಭಕ್ತಿಯ ಪುಸ್ತಕಗಳೇ ಇದ್ದವು. ಅವುಗಳ ಜೊತೆಗೆ ಶ್ರೀರಾಮಕೃಷ್ಣ–ವಿವೇಕಾನಂದರ ಬಗೆಗಿನ ಪುಸ್ತಕಗಳು ಕೂಡ ಇದ್ದವು.

ಗಾಂಧೀಜಿಯವರಿಂದ ಯುವಕರು ಕಲಿತ ಇನ್ನೊಂದು ಪಾಠವೆಂದರೆ ಸ್ತ್ರೀಯರನ್ನು ಗೌರವದಿಂದ ನೋಡುವುದು. ಈ ಭಾವನೆಯಿಂದ ನಮ್ಮ ಅಕ್ಕ-ತಂಗಿಯರ ವಿದ್ಯಾಭ್ಯಾಸಕ್ಕಾಗಿ ನಾವು ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟೆವು.

ಈ ಎಲ್ಲ ಸಗುಣಗಳಿಂದ ಕೂಡಿದ್ದರಿಂದಲೇ, ನನ್ನಂಥ ಹಲವರಿಗೆ ರಾಮಕೃಷ್ಣ ಮಠಕ್ಕೆ ಸೇರುವ ಅರ್ಹತೆ ದೊರಕಿತ್ತು ಎಂದೆನಿಸುತ್ತದೆ. ೧೯೫೦ ಅಥವಾ ೧೯೫೧ ರ ಶ್ರೀಕೃಷ್ಣಾಷ್ಟಮಿಯ ದಿವಸ ಹಿರಿಯ ಗೆಳೆಯರೊಬ್ಬರು, ನನ್ನನ್ನು ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠಕ್ಕೆ ಕರೆದುಕೊಂಡು ಹೋದರು. ಅಂದು ಸ್ವಾಮಿ ತ್ಯಾಗೀಶಾನಂದಜಿ ಮತ್ತು ಅದೇ ತಾನೇ ಪಾಶ್ಚಾತ್ಯ ದೇಶಗಳಿಂದ ಮರಳಿಬಂದಿದ್ದ ಸ್ವಾಮಿ ಯತೀಶ್ವರಾನಂದಜಿ – ಇಬ್ಬರನ್ನೂ ನಾನು ಪ್ರಥಮಬಾರಿಗೆ ದರ್ಶಿಸಿದೆ. ಇದೇ ಗಾಂಧೀಜಿಯವರಿಂದ ಗುರುಮಹಾರಾಜರೆಡೆಗೆ ಹೋಗುವುದಕ್ಕೆ ನಾನು ಇರಿಸಿದ ಅಂಬೆಗಾಲಾಗಿತ್ತು.

ಇದಾಗಿ ಸುಮಾರು ಮೂರು ವರ್ಷಗಳ ನಂತರ ನನ್ನ ಮತ್ತೊಬ್ಬ ಗೆಳೆಯರು ನನ್ನನ್ನು ಸ್ವಾಮಿ ಯತೀಶ್ವರಾನಂದಜಿ ಅವರಿಗೆ ಪರಿಚಯಿಸಲು ಕರೆದುಕೊಂಡುಹೋದರು. ಸ್ವಾಮಿಗಳು, "ನೀನು ಯಾವ ಆಧ್ಯಾತ್ಮಿಕ ಸಾಧನೆಗಳನ್ನು ಮಾಡುತ್ತಿದ್ದೀಯೆ? " ಎಂದು ನನ್ನನ್ನು ಕೇಳಿದರು. "ಭಗವದ್ಗೀತೆ ಓದುತ್ತೇನೆ. ಗಾಯತ್ರೀ ಜಪ ಮಾಡುತ್ತೇನೆ" ಎಂದು ನಾನು ಅವರಿಗೆ ಹೇಳಿದೆ. "ಅಷ್ಟು ಮಾತ್ರ ಸಾಲದು" ಎಂದರು ಅವರು. "ನಾನು ಬ್ರಹ್ಮಚಾರಿಯಾಗಿದ್ದು ಕೊಂಡು, ಗ್ರಾಮಸೇವೆ ಮಾಡಲು ಬಯಸುತ್ತೇನೆ" ಎಂದು ಹೇಳಿದೆ. ಆಗ ಅವರು, "ಮೊದಲು ನಿನ್ನ ಜೀವನವನ್ನು ಆಧ್ಯಾತ್ಮಿಕತೆ ಯಿಂದ ದೃಢಪಡಿಸಿಕೋ. ಅನಂತರ ಎಷ್ಟೋ ಸೇವಾಕಾರ್ಯಗಳು ತಾವೇ ತಾವಾಗಿಯೇ ನಿನ್ನ ಹತ್ತಿರ ಬರುವುವು. ನೀನು ಅವುಗಳನ್ನು ನಿಭಾಯಿಸಲು ಪ್ರಯಾಸಪಡುವೆ" ಎಂದರು. (ಅದು ಮುಂದೆ ಸತ್ಯವಾಗಿ ಪರಿಣಮಿಸಿತು.)

ಆಧ್ಯಾತ್ಮಿಕ ಜೀವನವನ್ನು ದೃಢಪಡಿಸಿಕೊಳ್ಳುವುದು ಹೇಗೆ? ಇದೇ ಪ್ರಶ್ನೆಯೇ ನನ್ನಂಥವರನ್ನು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸಾಮ್ರಾಜ್ಯಕ್ಕೆ ಎಳೆದುತಂದದ್ದು.

ನಾನಿಟ್ಟುಕೊಂಡಿದ್ದ ಆಧ್ಯಾತ್ಮಿಕ ವ್ಯಕ್ತಿಯ ಕಲ್ಪನೆ ಒಬ್ಬ ತಪಸ್ವಿಯ ಹಾಗಿರಬೇಕು ಎಂಬ ಕಲ್ಪನೆ; ತೆಳ್ಳಗಿನ, ಮೀಸೆ-ದಾಡಿ ಬಿಟ್ಟಿರುವ, ನಗುವಿಲ್ಲದ ಮುಖದ ವ್ಯಕ್ತಿಯ ಕಲ್ಪನೆ. ಆದರೆ ನಾನು ಸ್ವಾಮಿ ಯತೀಶ್ವರಾನಂದಜಿ ಅವರನ್ನು ನೋಡಿದಾಗ ಮೇಲಿನ ಕಲ್ಪನೆಗಳೆಲ್ಲ ತಲೆಕೆಳಗಾಗಿ ಹೋದವು. ಅವರದು ದುಂಡು ಶರೀರ; ಶ್ವೇತವರ್ಣ; ತೇಲುತ್ತಿರುವ ಕಣ್ಣುಗಳು; ಹೊಳೆಯುತ್ತಿರುವ ಕಾಷಾಯವಸ್ತ್ರ; ನಗುನಗುತ್ತಿರುವ ಮುಖ. ನಿಜವಾದ ಆಧ್ಯಾತ್ಮಿಕ ವ್ಯಕ್ತಿ ಹೀಗೆ ಇರ ಬಲ್ಲರೇ ಎಂದು ನನಗೆ ಆಶ್ಚರ್ಯವಾಯಿತು.

ರಾಮಕೃಷ್ಣ ಸಂಘದ ಸಂಪರ್ಕಕ್ಕೆ ಬಂದ ನಾನು ಶ್ರೀರಾಮಕೃಷ್ಣರ ಉಪದೇಶಗಳ ಅಧ್ಯಯನದ ಮೂಲಕ ಈ ಕೆಳಗಿನ ನಿರ್ಧಾರಕ್ಕೆ ಬಂದೆ:

ಕಲಿಯುಗದಲ್ಲಿ ಸತ್ಯವೇ ತಪಸ್ಸು. ಪೂರ್ಣ ಬ್ರಹ್ಮಚರ್ಯವು ಭಗವಂತನ ಮೇಲಿನ ಭಕ್ತಿಯಿಂದ, ಅವನ ನಾಮಸ್ಮರಣೆಯಿಂದ ಸುಲಭವಾಗಿ ಪ್ರಾಪ್ತವಾಗುವುದು. ಆಧ್ಯಾತ್ಮಿಕ ವ್ಯಕ್ತಿಯಲ್ಲಿ 'ಸ್ವಾರ್ಥ' ಇರಬಾರದು. ನಾಮಜಪ, ಹೃತ್ಪೂರ್ವಕವಾಗಿ ದೇವರನ್ನು ನೋಡುವ ಹಂಬಲ ಮತ್ತು ಕಣ್ಣೀರಿಟ್ಟು ಭಗವಂತನ ಪ್ರಾರ್ಥನೆ ಮಾಡುವುದು, ಸಾಧುಸಜ್ಜನರ ಸಂಗ ಮತ್ತು ಅವರ ಸೇವೆ – ಈ ಎಲ್ಲ ಸಾಧನೆಗಳಿಂದ, ಎಲ್ಲಕ್ಕಿಂತ ಹೆಚ್ಚಾಗಿ ಶ್ರೀರಾಮಕೃಷ್ಣರಂತಹ ಅವತಾರಪುರುಷರಲ್ಲಿ ಶರಣಾಗಿ ಅವರ ಕೃಪೆ ಪಡೆಯುವುದರಿಂದ ಭಗವಂತನನ್ನು ಸುಲಭವಾಗಿ ಕಾಣಬಹುದು. ಇದೇ ನಿಜವಾದ ಆಧ್ಯಾತ್ಮಿಕತೆ, ಇದೇ ನಿಜವಾದ ಧರ್ಮ. ಇದೇ ಮನುಷ್ಯಜೀವನದ ಪರಮೋದ್ದೇಶ. ಉಳಿದೆಲ್ಲವೂ, ಹಣ, ಹೆಸರು, ಅಧಿಕಾರ, ಜನಸೇವೆ – ಇವೆಲ್ಲವೂ ಈ ಉದ್ದೇಶಕ್ಕಾಗಿಯೇ ಉಪಯೋಗವಾಗಬೇಕು. ಹಾಗಿಲ್ಲದಿದ್ದರೆ ಅವೆಲ್ಲ ವ್ಯರ್ಥ.

ಶ್ರೀರಾಮಕೃಷ್ಣರ ನುಡಿಗಳನ್ನು ತಿಳಿದುಕೊಂಡಾಗ ನನಗೆ ಅನ್ನಿಸಿತು, ಇದಕ್ಕಾಗಿಯೇ ಅಲ್ಲವೇ ಗಾಂಧೀಜಿಯವರು ಕೂಡ ಬಾಳಿಬದುಕಿದ್ದು, ಸಾವನ್ನಪ್ಪಿದ್ದು ಎಂದು. ಅವರಂತೆ, 'ಮೋಕ್ಷವೇ ನಮ್ಮ ಜೀವನದ ಗುರಿ' ಎಂದು ನಿಶ್ಚಯಮಾಡಿಕೊಂಡಾಗಲೇ ನಾವು ನಮ್ಮ ಜೀವನವನ್ನೆಲ್ಲ ಇತರರ ಸೇವೆಯಲ್ಲಿ ಸವೆಸಬಲ್ಲೆವು. ಈ ದೃಢಭಾವನೆಯಿಂದಲೇ ನನ್ನಂತಹ ಕೆಲವರು ರಾಮಕೃಷ್ಣ ಸಂಘವನ್ನು ಅಪ್ಪಿಕೊಂಡದ್ದು, ಅದರ ಧ್ಯೇಯೋದ್ದೇಶಗಳಿಗೆ ನಮ್ಮನ್ನು ನಾವು ಸಮರ್ಪಿಸಿಕೊಂಡದ್ದು. ಆಹಾ, ಈ ಶ್ರೀರಾಮಕೃಷ್ಣ ಪರಮಹಂಸರ ಜೀವನ ಮತ್ತು ಉಪದೇಶಗಳಾದರೋ ಎಷ್ಟೊಂದು ಅದ್ಭುತವಾದುವು!

ಶ್ರೀರಾಮಕೃಷ್ಣರ ಜೀವನ ಆಧ್ಯಾತ್ಮಿಕತೆಯನ್ನು ವ್ಯವಹಾರಕ್ಕೆ ತಂದ ಜೀವನ. ದೇವರಲ್ಲಿ ನಂಬಿಕೆ ಇಲ್ಲದಿರುವ ಈ ಯುಗದ ಆಧುನಿಕ ವ್ಯಕ್ತಿಗಳ ಕಣ್ಣನ್ನು ತೆರೆಸುವಂಥದ್ದು ಎಂದು ಗಾಂಧೀಜಿಯವರೇ ಹೇಳಿದ್ದಾರೆ. ಈಗ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳ ಕೆಲವು ವಿಶಿಷ್ಟ ಅಂಶಗಳನ್ನು ನೋಡೋಣ:

೧. ಶ್ರೀರಾಮಕೃಷ್ಣರು ಹಿಂದೂ, ಕ್ರೈಸ್ತ, ಇಸ್ಲಾಂ – ಈ ಎಲ್ಲ ಧರ್ಮಗಳ ಸಾಧನೆಗಳನ್ನೂ ಮಾಡಿದರು. "ಎಷ್ಟು ಮತಗಳೋ ಅಷ್ಟೇ (ದೇವರ ಕಡೆ ಹೋಗುವ) ಮಾರ್ಗಗಳು" ಎಂದು ಹೇಳಿದರು. ಈ ಯುಗಕ್ಕೆ ಬೇಕಾದ ಸಾರ್ವಭೌಮಿಕ, ವಿಶ್ವಾತ್ಮಕ ಧರ್ಮವನ್ನು ನೀಡಿದವರು ಶ್ರೀರಾಮಕೃಷ್ಣ ಪರಮಹಂಸರು.

೨. ಹಿಂದೂ ಮತದ ವೈಷ್ಣವ, ಶೈವ, ಶಾಕ್ತ, ದ್ವೈತ, ವಿಶಿಷ್ಟಾದ್ವೈತ, ಅದ್ವೈತಗಳಲ್ಲಿ ಸಮನ್ವಯವನ್ನು ಬೋಧಿಸಿ, ಹಿಂದೂಧರ್ಮದ ಏಕತೆಯ ಮಾರ್ಗವನ್ನು ಸುಗಮಗೊಳಿಸಿದರು.

೩. 'ಶಿವಜ್ಞಾನೇ ಜೀವಸೇವಾ' – ಶಿವನೆಂದು ಭಾವಿಸಿ ಜೀವಿಗಳ

ಸೇವೆ ಮಾಡಿ ಎಂಬ ಉಪದೇಶದ ಮೂಲಕ ಗೃಹಸ್ಥರು ಮತ್ತು ಸಂನ್ಯಾಸಿಗಳು – ಇಬ್ಬರಿಗೂ ಮೋಕ್ಷಮಾರ್ಗವನ್ನು ತೆರೆದಿಟ್ಟರು.

೪. ಶ್ರೀರಾಮಕೃಷ್ಣರು ಸ್ತ್ರೀಯರಿಗೆ ಆಧ್ಯಾತ್ಮಿಕತೆಯಲ್ಲಿಯೂ ವ್ಯಾವಹಾರಿಕತೆಯಲ್ಲಿಯೂ ಉನ್ನತ ಸ್ಥಾನವನ್ನು ನೀಡಿದರು. ಶಾರದಾದೇವಿಯವರನ್ನು 'ಫಲಹಾರಿಣಿ ಕಾಲಿ' ಯಂತೆ ಪೂಜಿಸಿದರು. ಆ ಮೂಲಕ, ನೂತನವಾದ ಸ್ತ್ರೀಜಾಗೃತಿಯನ್ನು ಹುಟ್ಟು ಹಾಕಿದರು.

೫. ಸ್ವಾಮಿ ವಿವೇಕಾನಂದರಂತಹ ವೈಜ್ಞಾನಿಕ ಮನೋಭಾವವುಳ್ಳ ಯುವಕರಿಗೆ, "ಧರ್ಮವೂ ಒಂದು ವಿಜ್ಞಾನವೇ. ಏಕೆಂದರೆ, ಭಗವಂತನ ಸಾಕ್ಷಾತ್ಕಾರವೇ ಧರ್ಮ" ಎಂದು ತಿಳಿಸಿಕೊಟ್ಟರು. ಭಗವಂತನನ್ನು ನೋಡುವ ಮಾರ್ಗವನ್ನೇ 'ಯೋಗ' ಎಂದು ಬೋಧಿಸಿದರು. ಎಲ್ಲರೂ ಭಗವಂತನನ್ನು ನೋಡಲು ಸಾಧ್ಯ. ಅಷ್ಟೇ ಅಲ್ಲ, ಆತನನ್ನು ಕಾಣುವುದೇ ಜೀವನದ ಪರಮ ಲಕ್ಷ್ಯ ಎಂದು ಅವರು ಬೋಧಿಸಿದರು.

೬. ಜೀವನದಲ್ಲಿ ಸಿರಿವಂತರ ಮನೆಯ ದಾಸಿಯಂತೆ ಅನಾಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಶ್ರೀರಾಮಕೃಷ್ಣರು ಒತ್ತಿ ಹೇಳಿದರು. ಭಗವಂತನ ಮೇಲೆ ಮಾಡುವ ಹೃತ್ಪೂರ್ವಕವಾದ ಭಕ್ತಿಯಿಂದ ಅನಾಸಕ್ತಿಯನ್ನು ಪಡೆದುಕೊಳ್ಳಬಹುದು; ಸತ್ಯ, ಪವಿತ್ರತೆ, ನಿಸ್ವಾರ್ಥ ಸೇವೆ, ನಂಬಿಕೆ, ಪ್ರಾರ್ಥನಾ ಮನೋಭಾವ ಇವೆಲ್ಲವನ್ನೂ ಗಳಿಸಿಕೊಳ್ಳಬಹುದು. ಇದನ್ನೇ ನಾವು ಸಮಾಜದ ಮುನ್ನಡೆ ಎಂದು ಕರೆಯಬಹುದೇ ಹೊರತು, ಬರೀ ಧನ ಮತ್ತು ಇಂದ್ರಿಯಭೋಗಗಳಲ್ಲ.

೭. ಶ್ರೀರಾಮಕೃಷ್ಣರ ನೂರಾರು ಗೃಹಸ್ಥ ಶಿಷ್ಯರು ಮತ್ತು ಸಂನ್ಯಾಸಿ ಶಿಷ್ಯರು ಅವರ ಮಾರ್ಗವನ್ನೇ ಅನುಸರಿಸಿ ಭಗವತ್ಸಾಕ್ಷಾತ್ಕಾರವನ್ನು ಪಡೆದುಕೊಂಡರು, ಅನಾಸಕ್ತರಾಗಿ ಬಾಳಿದರು. ಸಮಾಜಕ್ಕೆ ಸೇವೆ ಸಲ್ಲಿಸಿದರು. ಅಂತ್ಯಕಾಲದಲ್ಲಿ ಭಗವಂತನ ನಾಮಸ್ಮರಣೆ ಮಾಡುತ್ತ ನಗುನಗುತ್ತ ತೆರಳಿದರು.

೮. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಪ್ರೇರಣೆಯಿಂದಲೇ ಇವರುಗಳನ್ನೆಲ್ಲ ಸೇರಿಸಿ ರಾಮಕೃಷ್ಣ ಸಂಘವನ್ನಾಗಿ ರೂಪಿಸಿದರು. ಈ ಮಹಾನ್ ಸಂಸ್ಥೆಯು ಜನರ ಸೇವೆಯೇ ಜನಾರ್ದನನ ಸೇವೆ ಎಂಬ ಮಂತ್ರದ ಮೂಲಕ ದೀನ–ದಲಿತರ ಉದ್ಧಾರಕ್ಕಾಗಿ, ವಿವಿಧ ರೀತಿಯ ವಿದ್ಯೆ ಮತ್ತು ತಾಂತ್ರಿಕತೆಗಳ ಅಭಿವೃದ್ಧಿಗೆ ಕಾರಣವಾಗಿದೆ.

೯. **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ –** ಆಧ್ಯಾತ್ಮಿಕ ಉನ್ನತಿಗಾಗಿಯೂ, ಮಾನವಕುಲದ ಅಭಿವೃದ್ಧಿಗಾಗಿಯೂ ಬಾಳಿರಿ ಎಂಬ ಉದ್ದೇಶದಿಂದ ಸ್ವಾಮಿ ವಿವೇಕಾನಂದರು ತನ್ನ ಸ್ವಂತ ಮೋಕ್ಷ ಮತ್ತು ಜಗತ್ತಿನ ಹಿತಕ್ಕಾಗಿ ಎಂಬ ಅವಳಿ ಆದರ್ಶಗಳನ್ನು, ನಮಗೆ ನೀಡಿದ್ದಾರೆ. ಅವರ ಈ ಆದರ್ಶದ ಸಾಕಾರರೂಪವೇ 'ರಾಮಕೃಷ್ಣ ಸಂಘ.' ಇದು ನಮ್ಮ ಸನಾತನ ಧರ್ಮದ ನೂತನ ರೂಪವೇ ಹೌದು.

ಇದರಲ್ಲಿ ಪುರಾತನ ಕಾಲದ ಎಲ್ಲ ಋಷಿಮುನಿಗಳೂ ಹಾಗೂ ಆಧುನಿಕ ಋಷಿಗಳಾದ ಗಾಂಧೀಜಿ, ವಿನೋಬಾ, ಅರವಿಂದರು, ರಮಣರು ಮುಂತಾದವರೆಲ್ಲರೂ ಏಕೀಭಾವವನ್ನು ಹೊಂದಿದ್ದಾರೆ. ಬನ್ನಿ, ನಾವೂ ಈ ಆದರ್ಶವನ್ನು ಸ್ವೀಕರಿಸಿ ಧನ್ಯರಾಗೋಣ.

## ಸ್ನೇಹಪ್ರಭ

**ಹಿರಿಯರ ಕೆಲವು ನಿರ್ಧಾರಗಳನ್ನು ಕಿರಿಯರು ಪ್ರಶ್ನಿಸುವುದು ತಪ್ಪೇ? ಹಾಗೆ ಮಾಡಿದಾಗ, ಹಿರಿಯರು ಅಸಹನೆಯನ್ನು ತೋರುವುದು ಕೂಡ ತಪ್ಪಲ್ಲವೇ? ಕಿರಿಯರು ಯಾವಾಗಲೂ ಹಿರಿಯರು ಹೇಳಿದ್ದನ್ನು ಚಾಚೂತಪ್ಪದೆ ಪಾಲಿಸಬೇಕೇ?**

ಹಿರಿಯರ ಕೆಲವು ನಿರ್ಧಾರಗಳನ್ನು ಕಿರಿಯರು ಪ್ರಶ್ನಿಸುವುದು ತಪ್ಪೇನಲ್ಲ. ಆದರೆ ಆ ರೀತಿ ಪ್ರಶ್ನಿಸುವುದು ನಮ್ಮ ಅಹಂಕಾರದ ಪರಿಣಾಮವಾಗಿರಬಾರದು. ಬದಲು ಉನ್ನತ ನೈತಿಕ ಮತ್ತು ಆಧ್ಯಾತ್ಮಿಕ ಆದರ್ಶವನ್ನು ಆಧರಿಸಿರಬೇಕು. ಎಲ್ಲಾ ವಿಷಯಗಳಲ್ಲಿಯೂ ಇತರರನ್ನು ವಿರೋಧಿಸುವುದೇ ಕೆಲವರ ಧ್ಯೇಯವಾಗಿರುತ್ತದೆ. ಇದಕ್ಕೆ ಯಾವುದೇ ಉನ್ನತ ತಾತ್ವಿಕ ಹಿನ್ನೆಲೆ ಇರುವುದಿಲ್ಲ. ಅದು ಅಹಂಕಾರದ ಪರಿಣಾಮವಾದರೂ ಅವರು ಯಾವುದಾದರೂ ಆದರ್ಶದ ನೆಪವನ್ನು ಮುಂದಿಟ್ಟು ತಮ್ಮನ್ನು ತಾವು ಸಮರ್ಥಿಸಿಕೊಳ್ಳುತ್ತಾರೆ; ತಾವು ಒಂದು ಆದರ್ಶಕ್ಕೆ ಹೋರಾಡುತ್ತಿರುವುದಾಗಿ ತಮ್ಮ ಅಹಂಕಾರವನ್ನು ಮರೆಯುತ್ತಾರೆ. ಇಂತಹ ಸೋಗಿನ 'ಆದರ್ಶವಾದಿ'ಗಳಿಂದಲೇ ಎಲ್ಲೆಲ್ಲಿಯೂ ಅಶಾಂತಿ. ಅಂತಹ ಸಂದರ್ಭದಲ್ಲಿ ಹಿರಿಯರು ಅಸಹನೆಯನ್ನು ತೋರುವುದೂ ಅಹಂಕಾರದ ಪರಿಣಾಮವೇ. ತತ್ತ್ವಾಧಾರಿತ ನಿರ್ಧಾರಗಳನ್ನು ಪ್ರಶ್ನಿಸಿದರೆ ಅಸಹನೆ ಉಂಟಾಗುವುದಿಲ್ಲ. ನಿರ್ಧಾರಗಳು ಸ್ವಾರ್ಥೋದ್ದೇಶಗಳಿಂದ ಕೂಡಿದ್ದು, ಅದಕ್ಕೆ ತತ್ತ್ವದ ಬಣ್ಣವನ್ನು ಬಳಿದಾಗ ಅವನ್ನು ವಿರೋಧಿಸಿದರೆ ಅಸಹನೆ ಉಂಟಾಗುವುದು ಸ್ವಾಭಾವಿಕ. ಒಟ್ಟಿನಲ್ಲಿ ನಮ್ಮ ಉದ್ದೇಶ ಪವಿತ್ರವಾಗಿರಬೇಕು. ಇಲ್ಲಿ ಹಿರಿಯ ಕಿರಿಯ ಎಂಬ ಪ್ರಶ್ನೆ ಏಳುವುದಿಲ್ಲ.

ವಿಧೇಯತೆ ಒಂದು ವಿಶಿಷ್ಟ ಗುಣ. ಕಿರಿಯರು ಹಿರಿಯರಿಗೆ ವಿಧೇಯರಾಗಿರುವುದು, ಕೆಳಗಿನ ಹುದ್ದೆಯಲ್ಲಿರುವವರು ಮೇಲಿನ ಹುದ್ದೆಯಲ್ಲಿರುವವರಿಗೆ ವಿಧೇಯರಾಗಿರುವುದು ಕುಟುಂಬದ ಮತ್ತು ಸಂಸ್ಥೆಯ ಹಿತದೃಷ್ಟಿಯಿಂದ ಅತ್ಯಂತ ಆವಶ್ಯಕ. ಅನ್ಯಾಯ ಅತ್ಯಾಚಾರಗಳು ನಡೆಯುತ್ತಿದ್ದರೆ ಅವನ್ನು ವಿರೋಧಿಸಬೇಕಾಗುತ್ತದೆ. ಆದರೆ ಅವಿಧೇಯತೆ ಎಲ್ಲ ಬಗೆಯ ಸಂಸ್ಥೆ, ಕಾರ್ಯಕ್ರಮಗಳಿಗೂ ಮಾರಕ. ಸ್ವಾರ್ಥೋದ್ದೇಶಗಳಿಗೆ ದಾಸರಾದ ಅನೇಕರು ವ್ಯಕ್ತಿಸ್ವಾತಂತ್ರ್ಯ, ಹಕ್ಕು ಮುಂತಾದ ಘನ ಆದರ್ಶಗಳ ಮುಸುಕಿನಲ್ಲಿ ಅವಿಧೇಯರಾಗಿ ವರ್ತಿಸುತ್ತ, ಕುಟುಂಬದ, ಸಂಸ್ಥೆಯ ಮತ್ತು ಒಟ್ಟು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಾರೆ. ಸಮಾಜಹಿತದಲ್ಲಿ ವ್ಯಕ್ತಿಹಿತವನ್ನು ಕಾಣುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳೋಣ. ಆಗ ಇಂತಹ ಸಾಧಾರಣ ರೀತಿಯ ಪ್ರಶ್ನೆಗಳು ನಮ್ಮನ್ನು ಕಾಡುವುದಿಲ್ಲ.

(ಬರಹ: ಸ್ವಾಮಿ ನಿತ್ಯಸ್ಥಾನಂದ)